




**ಉತ್ತರಾಯಣ ಪುಣ್ಯ ಕಾಲದಲ್ಲಿ ಪವಿತ್ರ ಸ್ನಾನ ಮಾಡಿ, ಸಮರಸದ ಬಾಳ್ವೆಗೆ ನಾಂದಿಯಾಗುವ ಸಂಕ್ರಾಂತಿಯ ಸಾಮೂಹಿಕ ಹೊರ ಭೋಜನ ಸಂಪ್ರದಾಯವು ಕೃಷ್ಣಾ–ತುಂಗಭದ್ರಾ– ಭೀಮೆ ನದಿಗಳ ಉದ್ದಕ್ಕೂ ಬಳ್ಳಿಯಂತೆ ಹಬ್ಬಿದೆ.**

# ಸಮರಸದ ಬದುಕಿಗೆ ನಾಂದಿ

**■ ಮಲ್ಲಿಕಾರ್ಜುನ ನಾಲವಾರ**

ನಿಸರ್ಗದ ಬದಲಾವಣೆಯನ್ನು ಬದುಕಿನ ಬದಲಾವಣೆಗೆ ಅನ್ವಯಿಸಿಕೊಂಡ ಮನಸ್ಸುಗಳನ್ನು ಪ್ರೀತಿಯಿಂದ ಬೆಸೆಯುವ ಕೃಷಿಕರ ಸಮೃದ್ಧಿಯ ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿ. ಉತ್ತರಾಯಣ ಪುಣ್ಯ ಕಾಲದಲ್ಲಿ ಪವಿತ್ರ ಸ್ನಾನ ಮಾಡಿ, ಸಮರಸದ ಬಾಳ್ವೆಗೆ ನಾಂದಿಯಾಗುವ ಸಂಕ್ರಾಂತಿಯ ಸಾಮೂಹಿಕ ಹೊರ ಭೋಜನ ಸಂಪ್ರದಾಯವು ಕೃಷ್ಣಾ–ತುಂಗಭದ್ರಾ– ಭೀಮೆ ನದಿಗಳ ಉದ್ದಕ್ಕೂ ಬಳ್ಳಿಯಂತೆ ಹಬ್ಬಿದೆ.

ಸಸ್ಯ ಮತ್ತು ಭೂತಾಯಿ ಆರಾಧನೆಯ ಪ್ರತೀಕದ ಎಳ್ಳು ಅಮಾವಾಸ್ಯೆ ತರುವಾಯದ ಸೂರ್ಯ ಆರಾಧನೆಯ ಸಂಕ್ರಮಣವು ಸಾಮೂಹಿಕ ಊಟದ ಎಳ್ಳ ಅಮಾವಾಸ್ಯೆ ಪರಂಪರೆಯ ಮುಂದುವರಿದ ಭಾಗವಾಗಿದೆ. ಎಳ್ಳಮಾವಾಸ್ಯೆಗೆ ಭೂತಾಯಿ ಒಡಲಲ್ಲಿ ಬೆಳೆದ ಬೆಳೆಗೆ ಪೂಜೆ ಸಲ್ಲಿಸಿ ಚರಗ ಚೆಲ್ಲಿದರೆ; ಸಂಕ್ರಮಣಕ್ಕೆ ಭೂತಾಯಿ ಕೊಟ್ಟ ಹೊಸ ಕಾಳುಗಳನ್ನು ಖಾದ್ಯಗಳಾಗಿಸಿ ಪ್ರಕೃತಿಯ ಮಡಿಲಲ್ಲಿ ಒಂದಾಗಿ ಹಂಚಿಕೊಂಡು ತಿನ್ನುವ ಹಬ್ಬ.

ರೈತನ ಸಂಬಂಧವು ಭೂಮಿ ಉಳಲು ಹೆಗಲು ಕೊಡುವ ಜಾನುವಾರುಗಳೊಂದಿಗೆ, ಬೆಳೆ ಕೊಟ್ಟ ಭೂತಾಯಿಯೊಂದಿಗೆ, ಸಕಲ ಜೀವ ಜಗತ್ತಿನ ಸಮೃದ್ಧಿಯ ಮೂಲವಾದ ನದಿ–ಹೊಳೆ, ಕೆರೆ–ಕಟ್ಟೆಗಳೊಂದಿಗೆ ಜೋಡಿಸಿದೆ. ಚೈತನ್ಯದಾಯಕನಾದ ಸೂರ್ಯ ದಕ್ಷಿಣದಿಂದ ಉತ್ತರಾಯಣದ ಕಡೆಗೆ ತನ್ನ ಪಥ ಬದಲಿಸುವ ಸುಸಮಯದಲ್ಲಿ ತನ್ನನ್ನು ಹರಸಿದ ಪ್ರಕೃತಿಗೆ ಮೊದಲ ಪ್ರಸಾದವನ್ನು ಸಮರ್ಪಿಸುವ ಹಬ್ಬವೂ ಹೌದು.

ಮುಂಗಾರಿನಲ್ಲಿ ಬಿತ್ತಿದ ಭತ್ತ, ಮೆಕ್ಕೆಜೋಳ, ಹೆಸರು, ತೊಗರಿ, ಸಜ್ಜೆ, ನವಣೆ, ಅಲಸಂದಿ, ಹುರುಳಿ, ಎಳ್ಳು, ಶೇಂಗಾ, ಉದ್ದು, ಅವರೆಯಂತಹ ಪೈರು ಸಂಕ್ರಮಣದ ವೇಳೆಗೆ ಮನೆಗೆ ಬಂದು ಸಂಪತ್ತಿನ ಮಹಾಲಕ್ಷ್ಮಿಯಾಗಿ ತುಂಬಿದರೆ; ಜೋಳ ಮತ್ತು ಗೋಧಿ ತೆನೆಗಳು ಕಾಳಿನಿಂದ ತುಂಬಿ ಸೀತಿನಿಯಾಗಿ, ಹಸಿ ಕಡಲೆ ಸುಲುಗಾಯಿಯಾಗಿ ಹೊಲಗಳಲ್ಲಿ ವೈದುಂಬಿರುತ್ತದೆ. ಮನೆ ತಂಬಿದ ಬಗೆಬಗೆಯ ಕಾಳುಗಳು ಪಲ್ಯ, ತರಹೇವಾರಿ ಸಿಹಿ ಪದಾರ್ಥಗಳ ಸಂಕ್ರಮಣದ ಪುಷ್ಕಳ ಭೋಜನದ ಪಟ್ಟಿಯಲ್ಲಿ ಜೋಳ, ಗೋಧಿ ಸೀತಿನಿಗಳು, ಹಸಿ ಕಡಲೆ ಸೈಡ್ ಡಿಶ್ ಆಗಿ (ಹೆಚ್ಚುವರಿ ಭಕ್ಷ್ಯ) ಸೇರಿರುತ್ತದೆ.

ಸಂಕ್ರಮಣದ ಎರಡು–ಮೂರು ದಿನಗಳ ಮೊದಲೇ ಹಬ್ಬದ ಸಿದ್ಧತೆಯ ಸಂಭ್ರಮ ಮನೆ ಮಾಡಿರುತ್ತದೆ. ಮನೆಯ ದೂಳು ಒರೆಸಿ, ಸಗಣಿಯಿಂದ ಅಂಗಳ ಸಾರಿಸುವರು. ಕೀಟ ನಿವಾರಕ ಗುಣವಿರುವ ಸುಣ್ಣ, ಝಾಜ (ಮಣ್ಣಿನ ಕೆಂಪು ಉಂಡೆ) ಮನೆಯ ಹೊಸ್ತಿಲು, ದನದ ಕೊಟ್ಟಿಗೆ ಹಚ್ಚುತ್ತಾರೆ. ಬಾಗಿಲಿಗೆ ಮಾವಿನ ಎಲೆಗಳ ತೋರಣವನ್ನು ಕಟ್ಟಿ ಅಲಂಕರಿಸುವರು.

ಹಬ್ಬದ ಹಿಂದಿನ ದಿನವೇ ಮಾರುಕಟ್ಟೆಗೆ ತೆರಳುವ ಮಹಿಳೆಯರು ದಿನಸಿ ಪದಾರ್ಥಗಳು, ತರಕಾರಿ, ನಾನಾ ಬಗೆಯ ಸೊಪ್ಪುಗಳ ಖರೀದಿಸಿ ಮನೆಗೆ ತರುತ್ತಾರೆ. ನಸುಕಿನ ಜಾವದಲ್ಲಿ ಎದ್ದು ಜೋಳದ ಉಂಡೆ, ಪುಂಡಿ ಪಲ್ಯ, ಎಣ್ಣೆ ಬದನೆಕಾಯಿ ಪಲ್ಯ, ಪಾಲಕ ಪಲ್ಯ, ಈರುಳ್ಳಿ ಸೊಪ್ಪು, ಟೊಮ್ಯಾಟೊ, ಈರುಳ್ಳಿ ಮಿಶ್ರಿತ ಭರ್ತಾ, ಈರುಳ್ಳಿ ಪಲ್ಯ, ಕೆಂಪು ಚಟ್ನಿ, ಗುರೆಳ್ಳು ಚಟ್ನಿ ಪುಡಿ, ಗಟ್ಟಿ ಮೊಸರು, ಬಾನ, ನವಣೆ ಅನ್ನ, ಶೇಂಗಾ ಪುಡಿ, ಹಪ್ಪಳ, ಸಂಡಿಗೆ, ಭಜ್ಜಿ, ಬದನೆಕಾಯಿ ಬರ್ತಾ, ಕಡ್ಲಿ ಚಟ್ನಿ, ಶೇಂಗಾ ಚಟ್ನಿ, ಮಾದ್ಲಿ, ಹೂರಣ ಹೋಳಿಗೆಯಂತಹ ಇತ್ಯಾದಿ ಪದಾರ್ಥಗಳು ತಯಾರಿಸಿ ಪಾತ್ರೆಗಳಲ್ಲಿ ಅನ್ನ, ಸಾಂಬಾರ್ ಹಾಕುವ ವೇಳೆಗೆ ಬೆಳಕು ಹರಿದು ಮಾಗಿಯ ಚಳಿಯೂ ನಿಧಾನಕ್ಕೆ ಕರಗಿರುತ್ತದೆ.

